**All India Radio: Bangalore**
**National Bulletins In Kannada**
**02.08.2025 / 19.35 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**02.08.2025 / 19.35 hrs**

**<><*<><>*><>**

ಮುಖ್ಯಾಂಶಗಳು

ಮುಖ್ಯಾಂಶಗಳು

೧. ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ; ೨೦ನೇ ಕಂತಿನ ಹಣ, ೯ ಕೋಟಿ ೧೦ ಲಕ್ಷ ರೈತರ ಖಾತೆಗಳಿಗೆ ನೇರ ಜಮೆ

೨. ಅತ್ಯಾಚಾರ ಪ್ರಕರಣ ; ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ಜೀವಾವಧಿ ಶಿಕ್ಷೆ

೩. ಅಂಗಾಂಗ ಕಸಿಯಲ್ಲಿ ಭಾರತಕ್ಕೆ ಜಾಗತಿಕ ಮಟ್ಟದಲ್ಲಿ ಮೂರನೇ ಸ್ಥಾನ; ಕೇಂದ್ರ ಸಚಿವ ಜೆ.ಪಿ.ನಡ್ಡಾ

೪. ಆಂಡರ್ಸನ್-ತೆಂಡೂಲ್ಕರ್ ಟ್ರೋಫಿಯ ಅಂತಿಮ ಟೆಸ್ಟ್; ಭಾರತ ೧೬೬ ರನ್ ಗಳ ಮುನ್ನಡೆ

><><><><><><><><

ಪ್ರಧಾನಿ ನರೇಂದ್ರ ಮೋದಿ ವಾರಾಣಸಿಯಲ್ಲಿಂದು ಪ್ರಧಾನಮಂತ್ರಿ ಕಿಸಾನ್ ಯೋಜನೆಯ ೨೦ನೇ ಕಂತಿನ ಹಣ ಬಿಡುಗಡೆ ಮಾಡಿದರು. ಇದೇ ವೇಳೆ ಅವರು, ೨ ಸಾವಿರದ ೨೦೦ ಕೋಟಿ ರೂಪಾಯಿಗೂ ಅಧಿಕ ಮೊತ್ತದ ೫೨ ಅಭಿವೃದ್ಧಿ ಯೋಜನೆಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಿದರು. ಬಳಿಕ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ ಅಡಿಯಲ್ಲಿ ದೇಶದ ಹತ್ತು ಕೋಟಿ ರೈತರ ಖಾತೆಗಳಿಗೆ ನೇರವಾಗಿ ೨೧ ಸಾವಿರ ಕೋಟಿ ರೂಪಾಯಿಯನ್ನು ಜಮಾ ಮಾಡಲಾಗಿದೆ. ಇದರ ಜತೆಗೆ ವಾರಾಣಸಿಯ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಸುಮಾರು ೨ ಸಾವಿರ ಕೋಟಿ ರೂಪಾಯಿಗೂ ಅಧಿಕ ಮೊತ್ತದ ಯೋಜನೆಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಲಾಗಿದೆ ಎಂದು ಹೇಳಿದರು. ಆಪರೇಷನ್ ಸಿಂದೂರ್ ಮೂಲಕ ದೇಶದ ಹೆಣ್ಣು ಮಕ್ಕಳಿಗೆ ನೀಡಿದ್ದ ಭರವಸೆಯನ್ನು ಈಡೇರಿಸಿರುವುದಾಗಿ ಅವರು ತಿಳಿಸಿದರು. ಪ್ರಧಾನಮಂತ್ರಿ ಕಿಸಾನ್ ಯೋಜನೆಯ ೨೦ನೇ ಕಂತಿನ

ಬಿಡುಗಡೆಯ ಮೂಲಕ ಪ್ರಧಾನಿ, ೯ ಕೋಟಿ ೧೦ ಲಕ್ಷ ರೈತರ ಖಾತೆಗಳಿಗೆ ನೇರವಾಗಿ ಒಟ್ಟು ೨೦ ಸಾವಿರದ ೫೦೦ ಕೋಟಿ ರೂಪಾಯಿ ಜಮೆ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಿದರು. ಇದರಿಂದ ಪಿಎಂ ಕಿಸಾನ್ ಯೋಜನೆಯಡಿ ಒಟ್ಟು ಬಿಡುಗಡೆಗೊಳಿಸಿದ ಮೊತ್ತ ೩ ಲಕ್ಷ ೯೦ ಸಾವಿರ ರೂಪಾಯಿ ದಾಟಲಿದೆ. ವಾರಾಣಾಸಿಯ ರಸ್ತೆ ಸಂಪರ್ಕ ಸುಧಾರಣೆಯ ಕ್ರಮವಾಗಿ ಪ್ರಧಾನಿ, ವಿವಿಧ ರಸ್ತೆ ಕಾಮಗಾರಿಗಳಿಗೆ ಚಾಲನೆ ನೀಡಿದರು. ಇದರ ಜೊತೆಗೆ ಮೂಲಸೌಕರ್ಯ ಅಭಿವೃದ್ಧಿಯ ಭಾಗವಾಗಿ ಸ್ಮಾರ್ಟ್ ವಿತರಣಾ ಯೋಜನೆಯಡಿ ವಿವಿಧ ಕಾಮಗಾರಿಗಳಿಗೆ ಹಾಗೂ ೮೮೦ ಕೋಟಿ ರೂಪಾಯಿ ಮೊತ್ತದ ವಿದ್ಯುತ್ ಮೂಲಸೌಕರ್ಯ ಕುರಿತ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು. ಇದೇ ವೇಳೆ ಪ್ರಧಾನಿ, ಜಲಜೀವನ್ ಮಿಷನ್ ಅಡಿ ೪೨ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳಿಗೆ ಚಾಲನೆ ನೀಡಿದರು ಹಾಗೂ ನಗರ ವ್ಯಾಪ್ತಿಯ ೫೩ ಶಾಲಾ ಕಟ್ಟಡಗಳ ಅಭಿವೃದ್ಧಿ ಕಾಮಗಾರಿಗೆ ಹಸಿರು ನಿಶಾನೆ ತೋರಿದರು. ಇದೇ ಸಂದರ್ಭದಲ್ಲಿ ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಹ್ಲಾದ ಜೋಶಿ ತಿಳಿಸಿದ್ದಾರೆ. ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿ ರೈತರೊಂದಿಗೆ ಸಂವಾದ ನಡೆಸಿದರು.  ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನ ಹಾಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ರೈತರ ಖಾತೆಗೆ ೨೦ನೇ ಕಂತಿನ ಹಣವನ್ನು ಬಿಡುಗಡೆ ಮಾಡುವ ಕಾರ್ಯಕ್ರಮದ ನೇರ ಪ್ರಸಾರವನ್ನು ರೈತರೊಂದಿಗೆ ವೀಕ್ಷಿಸಿ, ನಂತರ ಮಾತನಾಡಿದರು.  ಕೇಂದ್ರ ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಬೆಂಗಳೂರಿನ ಯಲಹಂಕ ಬಳಿಯಿರುವ ಐಸಿಎಆರ್ ಆವರಣದಲ್ಲಿ ಏರ್ಪಡಿಸಲಾಗಿದ್ದ ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ೨೦ನೇ ಕಂತಿನ ಹಣ ಬಿಡುಗಡೆ ನೇರ ಪ್ರಸಾರ ಕಾರ್ಯಕ್ರಮದಲ್ಲಿ ಮಾತನಾಡಿದರು.

><><><><><><><><

ಬೆಂಗಳೂರಿನ ಸಂಸದರು, ಶಾಸಕರ ವಿಶೇಷ ನ್ಯಾಯಾಲಯವು ಮಹತ್ವದ ತೀರ್ಪಿನಲ್ಲಿ, ಅತ್ಯಾಚಾರ ಪ್ರಕರಣದಲ್ಲಿ ಜೆಡಿಎಸ್‌ನ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಈ ಪ್ರಕರಣದಲ್ಲಿ ಅಶ್ಲೀಲ ವೀಡಿಯೊ ಮತ್ತು ೪೭ ವರ್ಷದ ಮಹಿಳೆಯ ಮೇಲೆ ಅತ್ಯಾಚಾರ ನಡೆದಿತ್ತು.

ಶಿಕ್ಷೆಯನ್ನು ಪ್ರಕಟಿಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ್ ಭಟ್ ಅವರು ಅಪರಾಧಿಗೆ ೧೦ ಲಕ್ಷ ರೂಪಾಯಿ ದಂಡವನ್ನೂ ವಿಧಿಸಿದರು.

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಮೊಮ್ಮಗ ಪ್ರಜ್ವಲ್ ರೇವಣ್ಣಗೆ ಪದೇ ಪದೇ ಅತ್ಯಾಚಾರ ಮಾಡಿ ಅಧಿಕಾರ ದುರುಪಯೋಗಪಡಿಸಿಕೊಂಡ ಆರೋಪದಲ್ಲಿ ಶಿಕ್ಷೆ ವಿಧಿಸಲಾಗಿದೆ. ಸಂತ್ರಸ್ತೆಗೆ ೭ ಲಕ್ಷ ರೂಪಾಯಿ ದಂಡ ಪಾವತಿಸಲು ನ್ಯಾಯಾಲಯ ಆದೇಶಿಸಿದೆ. ಈ ಪ್ರಕರಣವು ರೇವಣ್ಣ ಕುಟುಂಬದ ಒಡೆತನದ ಅತಿಥಿ ಗೃಹದಲ್ಲಿ ಸೇವಕಿಯಾಗಿ ಕೆಲಸ ಮಾಡುತ್ತಿದ್ದ ಮಹಿಳೆಯ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದೆ. ತನ್ನ ಸಾಕ್ಷ್ಯದಲ್ಲಿ, ತನ್ನ ಮೇಲೆ ಎರಡು ಬಾರಿ ಅತ್ಯಾಚಾರ ನಡೆದಿದೆ ಎಂದು ಸಂತ್ರಸ್ತೆ ನ್ಯಾಯಾಲಯದ ಮುಂದೆ ಹೇಳಿಕೊಂಡಿದ್ದರು. ೨೦೨೪ ರ ಲೋಕಸಭಾ ಚುನಾವಣೆಗೆ ಮುನ್ನ ಹಾಸನದಲ್ಲಿ ನಡೆದ ಲೈಂಗಿಕ ದೌರ್ಜನ್ಯದ ವೀಡಿಯೊಗಳು ವೈರಲ್ ಆದ ನಂತರ ಜರ್ಮನಿಯಿಂದ ಹಿಂದಿರುಗಿದಾಗ ಪ್ರಜ್ವಲ್ ರೇವಣ್ಣ ಅವರನ್ನು ಬಂಧಿಸಲಾಯಿತು. ಕಳೆದ ವರ್ಷ ಮೇ ೩೧ ರಿಂದ ಅವರು ಜೈಲಿನಲ್ಲಿದ್ದಾರೆ. ನ್ಯಾಯಾಲಯ ನಿನ್ನೆ ತೀರ್ಪು ನೀಡಿದ್ದು, ಇಂದು ಶಿಕ್ಷೆಯ ಪ್ರಮಾಣವನ್ನು ಪ್ರಕಟಿಸಲಾಗಿದೆ. ಪ್ರಜ್ವಲ್ ರೇವಣ್ಣ ಇದೇ ರೀತಿಯ ಮೂರು ಹೆಚ್ಚುವರಿ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ.

><><><><><><><><

೨೦೨೪ರಲ್ಲಿ ಮೂರು ಲಕ್ಷಕ್ಕಿಂತ ಹೆಚ್ಚು ನಾಗರಿಕರು ರಾಷ್ಟ್ರೀಯ ಅಂಗಾಂಗ ಮತ್ತು ಅಂಗಾಂಶ ಕಸಿ ಸಂಸ್ಥೆ ಮೂಲಕ ಅಂಗಾಂಗ ದಾನಕ್ಕೆ ಪ್ರತಿಜ್ಞೆ ಮಾಡಿದ್ದು, ಕಳೆದ ವರ್ಷ ದೇಶವು ಅತ್ಯುತ್ತಮ ಸಾಧನೆ ಮಾಡಿದ್ದು, ಒಂದೇ ವರ್ಷದಲ್ಲಿ ಸುಮಾರು ೧೮ ಸಾವಿರದ ೯೦೦ ಅಂಗಾಂಗಗಳನ್ನು ಯಶಸ್ವಿಯಾಗಿ ಕಸಿ ನಡೆಸಿ ದಾಖಲೆ ನಿರ್ಮಿಸಿದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜಗತ್ ಪ್ರಕಾಶ್ ನಡ್ಡಾ ಅವರು ಹೇಳಿದರು, ಅವರು ಇಂದು , ನವದೆಹಲಿಯಲ್ಲಿ ನಡೆದ ೧೫ನೇ ಅಂಗಾಂಗ ದಾನ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಭಾರತವು ಅಂಗಾಂಗ ಕಸಿಯಲ್ಲಿ ಜಾಗತಿಕ ಮಟ್ಟದಲ್ಲಿ ಮೂರನೇ ಸ್ಥಾನದಲ್ಲಿದೆ, ಅಂಗಾಂಗ ದಾನವನ್ನು ಮಾನವೀಯತೆಯ ಅತ್ಯುನ್ನತ ಸೇವೆಗಳಲ್ಲೊಂದೆಂದು ನಡ್ಡಾ ವರ್ಣಿಸಿದರು. ಕಾರ್ಯಕ್ರಮದಲ್ಲಿ ನಡ್ಡಾ ಅವರು ವಿವಿಧ ಅಂಗಾಂಗದಾತರ ಕುಟುಂಬಗಳು ಮತ್ತು ಅಂಗಾಂಗ ಪ್ರಾಪ್ತಿದಾರರನ್ನು ಗೌರವಿಸಿದರು. ರಾಷ್ಟ್ರೀಯ ಅಂಗಾಂಗ ಮತ್ತು ಅಂಗಾಂಶ ಕಸಿ ಸಂಸ್ಥೆಯ ವಾರ್ಷಿಕ ವರದಿ, ಇ-ನ್ಯೂಸ್‌ಲೆಟರ್ ಹಾಗೂ ಅಂಗಾಂಗ

ದಾನ ಜಾಗೃತಿ, ಆಯುರ್ವೇದ ಮತ್ತು ಯೋಗದ ಮೂಲಕ ಅಂಗಾಂಗ ಆರೋಗ್ಯ, ಮತ್ತು ರಾಜ್ಯಗಳ ಉತ್ತಮ ಕಾರ್ಯಚರಣೆಗಳ ಕುರಿತ ಮೂರು ಜಾಗೃತಿ ಪುಸ್ತಕಿಕೆಗಳನ್ನು ಸಚಿವ ಜಗತ್ ಪ್ರಕಾಶ್ ನಡ್ಡಾ ಬಿಡುಗಡೆ ಮಾಡಿದರು.

><><><><><><><><><

ಇಂಗಾಲ ಹೊರಸೂಸುವಿಕೆ ಮಾನವತೆಗೆ ಎದುರಾಗಿರುವ ಪ್ರಮುಖ ಜಾಗತಿಕ ಸವಾಲಾಗಿದ್ದು, ಇದನ್ನು ತಡೆಯಲು ಕಾರ್ಬನ್ ಕ್ಯಾಪ್ಚರ್ ತಂತ್ರಜ್ಞಾನವನ್ನು ಬಳಸುವುದರ ಜೊತೆಗೆ, ಮರಗಳನ್ನು ನೆಡುವ ಪರಂಪರೆಯನ್ನು ಉಳಿಸಿ ಬೆಳೆಸಬೇಕು. ನಾಗರಿಕರು ವನಮಿತ್ರರಾಗಬೇಕು ಎಂದು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದ್ರ ಯಾದವ್ ಕರೆ ನೀಡಿದರು. ಅವರು ಇಂದು ನವದೆಹಲಿಯ ಗುರುಗ್ರಾಮದ ಅರಾವಳಿ ಬೆಟ್ಟದ ಪ್ರದೇಶದಲ್ಲಿ ೭೫೦ ಎಕರೆಗಳಷ್ಟು ವಿಸ್ತಾರವಾದ ಥೀಮ್ ಆಧಾರಿತ ನಗರ ಅರಣ್ಯವಾದ ಮಾತೃವನ್ ಉಪಕ್ರಮಕ್ಕೆ ಚಾಲನೆ ನೀಡಿ ಮಾತನಾಡುತ್ತಿದ್ದರು. ಕಾರ್ಯಕ್ರಮದಲ್ಲಿ ಮಾತನಾಡಿದ ಕೇಂದ್ರ ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಅವರು, ಗುರುಗ್ರಾಮ್‌ವಂತಹ ಮೆಟ್ರೋ ನಗರಗಳು ಹಸಿರು ಕಟ್ಟಡಗಳು, ವನ್ಯಸಫಾರಿಗಳ ಮೂಲಕ ಪರಿಸರ ಪ್ರವಾಸೋದ್ಯಮ, ಥೀಮ್ ಆಧಾರಿತ ಜೀವವೈವಿಧ್ಯ ಉದ್ಯಾನಗಳು ಮುಂತಾದ ನವೀನ ಕಾರ್ಯಗಳಲ್ಲಿ ಸುಧಾರಿತ ಮಾದರಿಯಾಗಿ ಹೊರಹೊಮ್ಮಬೇಕು ಎಂದು ಹೇಳಿದರು. ಈ ಯೋಜನೆಯು ನಾಗರಿಕರಿಗೆ ಆರೋಗ್ಯಕರ ಹಾಗೂ ಶಾಂತಿಯುತ ಪರಿಸರ ಒದಗಿಸುವ ಮೂಲಕ ಒತ್ತಡರಹಿತ ಜೀವನಕ್ಕೆ ಸಹಾಯ ಮಾಡಲಿದೆ ಎಂದು ಅವರು ಹೇಳಿದರು.

><><><><><><><><><

ನಾಸಾದ ಕ್ರೂ-೧೧ ಕಾರ್ಯಾಚರಣೆಯ ಭಾಗವಾಗಿ ಅಮೆರಿಕ, ಜಪಾನ್ ಮತ್ತು ರಷ್ಯಾದ ನಾಲ್ವರು ಗಗನಯಾತ್ರಿಗಳು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವನ್ನು ಯಶಸ್ವಿಯಾಗಿ ತಲುಪಿದ್ದಾರೆ. ೧೫ ಗಂಟೆಗಳ ಪ್ರಯಾಣದ ನಂತರ ತಂಡವು ಇಂದು ಬೆಳಿಗ್ಗೆ ಐಎಸ್‌ಎಸ್ ನಲ್ಲಿ ಇಳಿಯಿತು.  ಅವರು ನಿನ್ನೆ ರಾತ್ರಿ ಫ್ಲೋರಿಡಾದ ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಸ್ಪೇಸ್ ಎಕ್ಸ್  ಫಾಲ್ಕನ್ ೯ ರಾಕೆಟ್‌ನಲ್ಲಿ ಹಾರಿದರು. ನಂತರ, ಕ್ರೂ-೧೧ರ ಸದಸ್ಯರು ಈಗಾಗಲೇ ಐಎಸ್‌ಎಸ್ ನಲ್ಲಿರುವ ಏಳು ಗಗನಯಾತ್ರಿಗಳನ್ನು ಸೇರಿಕೊಂಡರು. ಆರು ತಿಂಗಳ ವಾಸ್ತವ್ಯದ ಸಮಯದಲ್ಲಿ, ಕ್ರೂ-೧೧

ಗಗನಯಾತ್ರಿಗಳು ವಿವಿಧ ವೈಜ್ಞಾನಿಕ ಪ್ರಯೋಗಗಳು ಮತ್ತು ತಂತ್ರಜ್ಞಾನ ಪ್ರದರ್ಶನಗಳನ್ನು ನಡೆಸುತ್ತಾರೆ. ಇವುಗಳಲ್ಲಿ ಚಂದ್ರನ ಇಳಿಯುವಿಕೆಯನ್ನು ಅನುಕರಿಸುವುದು, ಬಾಹ್ಯಾಕಾಶ ಪ್ರಯಾಣಕ್ಕಾಗಿ ಕಣ್ಣಿನ ರಕ್ಷಣಾ ವಿಧಾನಗಳನ್ನು ಪರೀಕ್ಷಿಸುವುದು, ಬಾಹ್ಯಾಕಾಶದಲ್ಲಿ ಸಸ್ಯ ಕೋಶಗಳು ಹೇಗೆ ವಿಭಜನೆಯಾಗುತ್ತವೆ ಎಂಬುದನ್ನು ಅಧ್ಯಯನ ಮಾಡುವುದು ಮತ್ತು ಇತರ ಹಲವು ವಿಷಯಗಳು ಸೇರಿವೆ. ಕ್ರೂ-೧೧ ಬುಧವಾರದ ವೇಳೆಗೆ ಭೂಮಿಗೆ ಮರಳುವ ನಿರೀಕ್ಷೆಯಿದೆ.

><><><><><><><><

ಲಂಡನ್‌ನ ದಿ ಓವಲ್‌ನಲ್ಲಿ ನಡೆಯುತ್ತಿರುವ ಆಂಡರ್ಸನ್-ತೆಂಡೂಲ್ಕರ್ ಟ್ರೋಫಿಯ ಐದನೇ ಮತ್ತು ಅಂತಿಮ ಟೆಸ್ಟ್‌ನ ೩ ನೇ ದಿನವಾದ ಇಂದು, ಆತಿಥೇಯ ಇಂಗ್ಲೆಂಡ್ ವಿರುದ್ಧದ ಎರಡನೇ ಇನ್ನಿಂಗ್ಸ್‌ನಲ್ಲಿ ಭಾರತ ಭೋಜನ ವಿರಾಮದ ವೇಳೆಗೆ ೩ ವಿಕೆಟ್‌ಗೆ ೧೮೯ ರನ್ ಗಳಿಸಿದೆ. ಪ್ರವಾಸಿ ಭಾರತ ತಂಡವು ಈಗ ೧೬೬ ರನ್‌ಗಳ ಮುನ್ನಡೆಯಲ್ಲಿದೆ. ಯಶಸ್ವಿ ಜೈಸ್ವಾಲ್ ಅಜೇಯ ೮೫ ರನ್‌ಗಳೊಂದಿಗೆ ಬ್ಯಾಟಿಂಗ್ ಮಾಡುತ್ತಿದ್ದರೆ, ಶುಭ್ಮನ್ ಗಿಲ್ ೧೧ ರನ್‌ಗಳೊಂದಿಗೆ ಬ್ಯಾಟಿಂಗ್ ಮಾಡುತ್ತಿದ್ದರು. ಇಂದು ಆಕಾಶ್ ದೀಪ್ ೬೬ ರನ್‌ಗಳೊಂದಿಗೆ ಔಟಾಗಿದ್ದರು. ಭಾರತವು ರಾತ್ರಿಯ ಸ್ಕೋರ್ ೨ ವಿಕೆಟ್‌ಗೆ ೭೫ ರನ್‌ಗಳೊಂದಿಗೆ ಇನ್ನಿಂಗ್ಸ್ ಅನ್ನು ಪುನರಾರಂಭಿಸಿತು. ಇದಕ್ಕೂ ಮೊದಲು, ಮೊದಲ ಇನ್ನಿಂಗ್ಸ್‌ನಲ್ಲಿ, ಇಂಗ್ಲೆಂಡ್ ೨೪೭ ರನ್‌ಗಳಿಗೆ ಆಲೌಟ್ ಆದ ನಂತರ ೨೩ ರನ್‌ಗಳ ಮುನ್ನಡೆ ಸಾಧಿಸಿತು, ಇದಕ್ಕೆ ಪ್ರತಿಕ್ರಿಯೆಯಾಗಿ ಭಾರತ ೨೨೪ ರನ್‌ಗಳಿಗೆ ಆಲೌಟ್ ಆಗಿತ್ತು. ಭಾರತ ೧-೨ ಹಿನ್ನಡೆಯಲ್ಲಿರುವ ಸರಣಿಯನ್ನು ಸಮಬಲಗೊಳಿಸಲು ಎದುರು ನೋಡುತ್ತಿದೆ.

><><><><><><><><